ನವಸಾಕ್ಷರ ಪುಸ್ತಕ ಮಾಲೆ ೬೬

ಅಕ್ಕಮಹಾದೇವಿ

ವಸುಂಧರಾ ಶ್ರೀಧರ್



ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಲೋಕಶಿಕ್ಷಣ ನಿರ್ದೇಶನಾಲಯ

ನವಸಾಕ್ಷರ ಪುಸ್ತಕ ಮಾಲೆ - ೬೬

ಅಕ್ಕಮಹಾದೇವಿ

ವಸುಂಧರಾ ಶ್ರೀಧರ್

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ-೫೮೩ ೨೭೭

AKKAMAHADEVI : By Vasundhara Sridhar. Published by The Director of Prasaranga, Kannada University, Hampi - 583 211, KARNATAKA.
First Impression 1994, Pp. i i + 26, Rs. 8.00.


ಸಂಯೋಜನಾಧಿಕಾರಿ
ಎಚ್. ಎಸ್. ಶ್ರೀಮತಿ
ಪಠ್ಯ ಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧

ಮುಖಪುಟ ವಿನ್ಯಾಸ
ಕೆ. ಮಕಾಳಿ

ಬೆಲೆ : ರೂ. ೮.೦೦

ಮುದ್ರಕರು
ವಿನಾಯಕ ಆಫ್‌ಸೆಟ್ ಪ್ರಿಂಟರ್ಸ್
8/1, ಮಾರೇನಹಳ್ಳಿ, 1ನೇ ಕ್ರಾಸ್, 23ನೇ ಮೇನ್,
ಜೆ. ಪಿ. ನಗರ, ಬೆಂಗಳೂರು-560 078.
ಫೋನ್: 642102




ಅಕ್ಕಮಹಾದೇವಿ

ಕಾಯದ ಲಜ್ಜೆಯ ಕಲ್ಪಿತವ ಕಳೆದು ಜೀವದ ಲಜ್ಜೆಯ ಮೋಹವನಳಿದು,
ಮನದ ಲಜ್ಜೆಯ ನೆನಹ ಸುಟ್ಟು, ಭಾವದ ಕೂಟ ಬತ್ತಲೆಯೆಂದರಿದು
ತವಕದ ಸ್ನೇಹ ವ್ಯವಹಾರಕ್ಕೆ ಹೋಗದೆ, ಕೂಡಲಸಂಗಮದೇವಯ್ಯ!
ಎನ್ನ ಹೆತ್ತ ತಾಯಿ ಮಹಾದೇವಿಯಕ್ಕನ ನಿಲುವ ನೋಡಾ॥

- ಹೀಗೆಂದು ಮಹಾದೇವಿ ಅಕ್ಕನನ್ನು ಹಾಡಿ ಹೊಗಳಿದವರು ಬಸವಣ್ಣನವರು. ಹನ್ನೆರಡನೇ ಶತಮಾನ ಅಂದರೆ ಸುಮಾರು ಎಂಟುನೂರು ವರುಷಗಳ ಹಿಂದೆ ಹೆಣ್ಣೊಬ್ಬಳನ್ನು ಈ ಎತ್ತರಕ್ಕೆ ಏರಿಸಬೇಕಾದರೆ ಅವಳ ಹಿರಿಮೆಯ ಬಗ್ಗೆ ಗೌರವವೆನಿಸುತ್ತದೆ. ಪುರುಷ ಪ್ರಧಾನ ಸಮಾಜವಾದ ನಮ್ಮಲ್ಲಿ. ಹೆಣ್ಣು ಇಂದಿಗೂ ಎಷ್ಟೊಂದು ಕಷ್ಟಗಳನ್ನು ಅನುಭವಿಸಬೇಕಾಗುತ್ತದೆ. ಅಂದಿನ ಈ ಅಕ್ಕಮಹಾದೇವಿಯ ಸ್ವಾತಂತ್ರ್ಯದಿಂದ ಕೂಡಿರುವ ವಿಚಾರಗಳು ಇಂದಿನ ಹೆಣ್ಣುಮಕ್ಕಳಿಗೆ ಹೆಚ್ಚು ಸ್ಫೂರ್ತಿ ಕೊಡುತ್ತವೆ.

ಅಕ್ಕಮಹಾದೇವಿಯ ಕಥೆ ಹೇಳುತ್ತೇನೆ - ಮನಕೊಟ್ಟು ಕೇಳಿ.



ಓಂಕಾರ ಶೆಟ್ಟಿ ಮತ್ತು ಲಿಂಗಮ್ಮ ಮಕ್ಕಳಿಗಾಗಿ ಶಿವನನ್ನು ಬೇಡಿದರು

ಮಲೆನಾಡಿನ ಒಂದು ಪಟ್ಟಣ ಉಡುತಡಿ. ಆ ಊರಿನ ಅರಸ ಕೌಶಿಕ. ಆ ಊರಿನಲ್ಲಿ ಓಂಕಾರ ಶೆಟ್ಟಿ, ಲಿಂಗಮ್ಮ ಎಂಬ ಶಿವಭಕ್ತ ದಂಪತಿಗಳು ಇದ್ದರು. ಅವರಿಗೆ ಮಕ್ಕಳಾಗಿರಲಿಲ್ಲ. ಪ್ರತಿದಿನ ಶಿವನಲ್ಲಿ ಮಗುವಿಗಾಗಿ ಬೇಡುತ್ತಿದ್ದರು. ಓಂಕಾರ ಶೆಟ್ಟಿಯ ಸಮಾಧಾನದ ಮಾತುಗಳು ಅವಳಿಗೆ ಸಮಾಧಾನ ನೀಡಲಿಲ್ಲ. ಒಂದು ದಿನ ಮಠಕ್ಕೆ ಹೋದಾಗ ಲಿಂಗಮ್ಮ ಗುರುಗಳಾದ ಶ್ರೀಗುರುಲಿಂಗರ ಬಳಿ ಹೀಗೆ ಅರಿಕೆ ಮಾಡಿಕೊಂಡಳು.

"ಗುರುಗಳೇ, ಕನಸೊಂದನ್ನು ಕಂಡೆ"

"ಹೇಳು ತಾಯಿ" ಗುರುಲಿಂಗರು ನುಡಿದರು.


"ನಾನು ಹಸಿರು ಬೆಟ್ಟಗಳ ನಡುವೆ ತಿರುಗಾಡುವಾಗ ತಪದಲ್ಲಿ ಮೈಮರೆತ ಯೋಗಿ ಶಿವನನ್ನು ಕಂಡೆ. ಅವನ ಮುಡಿಯಲ್ಲಿದ್ದ ಹೂ, ಮುಡಿಯ ಗಂಗೆಯೊಡನೆ ನನ್ನ ಹತ್ತಿರ ತೇಲಿಬಂತು. ನಾನು ತೆಗೆದುಕೊಂಡು ಉಡಿಯಲ್ಲಿರಿಸಿಕೊಂಡೆ. ಯೋಗಿ ಶಿವ ಆ ಹೂವ ಮರಳಿ ಬೇಡಿದ. ನಾನು ನೊಂದೆ. ಇಲ್ಲವೆಂದೆ. ಆದರೆ ಇವರು ಶಿವನ ಮೀಸಲು ಹೂ ಅವನಿಗೇ ಕೊಡು ಎಂದರು. ನಾನು ಅವನ ಪಾದಗಳ ಬಳಿ ಇರಿಸಿದೆ" ಲಿಂಗಮ್ಮನ ಕಣ್ಣುಗಳಲ್ಲಿ ನೀರು ತುಂಬಿತ್ತು. ಶಿವಕನ್ಯೆಯು ಹುಟ್ಟುತ್ತಾಳೆ ಎಂದು ಗುರುಲಿಂಗರಿಗೆ ಅರ್ಥವಾಗಿತ್ತು "ನೀನು ಪುಣ್ಯವಂತಳು ಲಿಂಗಮ್ಮ. ನಿನ್ನ ಗರ್ಭದಿಂದ ಹೆಣ್ಣು ಕುಲವೇ ಹೆಮ್ಮೆಯಿಂದ ಬೀಗುವಂಥ ಶಿಶುವಿನ ಜನನವಾಗುತ್ತದೆ. ಶ್ರೀಗುರುಲಿಂಗರು ಲಿಂಗಮ್ಮನನ್ನು ಸಂತೈಸಿದರು. ದಿನಗಳು, ಕಳೆದವು. ಕನಸಿನ ದಿನಗಳು ನನಸಾದವು. ತುಂಬು ಗರ್ಭಿಣಿ ಲಿಂಗಮ್ಮ ಶಿವನ ಧ್ಯಾನ ಮಾಡುತ್ತಾ ಚಂದಿರನಂಥ ಹೆಣ್ಣು ಕೂಸನ್ನು ಹಡೆದಳು.



ಶಿವನ ಅನುಗ್ರಹದಿಂದ ಲಿಂಗಮ್ಮ ಮಗುವನ್ನು ಪಡೆದಳು

ಮನೆಯಲ್ಲಿ ಸಂಭ್ರಮವೊ ಸಂಭ್ರಮ. ಆಕಾಶದಲ್ಲಿಯ ಪೂರ್ಣ ಛಂದಿರನಂತೆ ಮಗು ಬೆಳೆಯುತ್ತಿತ್ತು. ಮಠದ ಗುರುಗಳಾದ ಗುರುಲಿಂಗರೊಡನೆ ಮನೆಗೆ ಬಂದಿದ್ದ ಶರಣ ಮರುಳಸಿದ್ದರು ಮಗುವಿಗೆ "ಮಹಾದೇವಿ" ಎಂದು ನಾಮಕರಣ ಮಾಡಿದರು. ಮುಂದೆ ಮಹಾದೇವಿ ಶಿವಭಕ್ತರಿಗೆ ಅಕ್ಕನಾಗಿ ಅಕ್ಕಮಹಾದೇವಿಯಾದಳು. ಮಹಾದೇವಿ ಎಂದೂ ಇತರ ಮಕ್ಕಳಂತೆ ಆಟ ಆಡಲಿಲ್ಲ. ಅವಳ ಆಟಪಾಟಗಳು ಬೇರೆಯೇ ರೀತಿಯದಾಗಿದ್ದವು. ಮಹಾದೇವಿ ಸದಾ ಬಸವಣ್ಣನವರ ವಚನ ಅಲ್ಲದೆ ಬೇರೆ ಬೇರೆ ಶರಣರ ವಚನಗಳನ್ನು ಹಾಡುತ್ತಿದ್ದಳು. ಅದರ ಅರ್ಥವನ್ನು ಮನನ ಮಾಡಿಕೊಳ್ಳುತ್ತಿದ್ದಳು. ಒಟ್ಟಿನಲ್ಲಿ ಅವಳ ರೀತಿ ಹಿರಿಯರ ಹಾಗೇ ಇರುತ್ತಿತ್ತು. ಸದಾ ತಪಸ್ಸನ್ನು ಮಾಡುವವಳ ಹಾಗೆ ಕುಳಿತು ಬಿಡುತ್ತಿದ್ದಳು.

ಶಿವನ ಪೂಜೆಯಲ್ಲಿ, ಓಂಕಾರದಲ್ಲಿ ಮೈಮರೆಯುತ್ತಿದ್ದಳು.



ಮಹಾದೇವಿ ಚಿಕ್ಕವಯಸ್ಸಿನಲ್ಲಿಯೇ ವಚನಗಳನ್ನು ಬರೆದಳು

ಅವಳ ಈ ರೀತಿ ತಂದೆತಾಯಿಯರಿಗೆ ಯೋಚನೆಯನ್ನುಂಟು ಮಾಡಿತು. ಸ್ವಾಭಿಮಾನ, ದಿಟ್ಟತನದ ಪ್ರತೀಕ ಮಹಾದೇವಿ.

ಅವಳಿಗೆ ಮಠಕ್ಕೆ ಹೋಗಿ ಕಲಿಯಲು ಆಸೆ. ಆದರೆ ತಾಯಿಗೆ ಇಷ್ಟವಿಲ್ಲ. ಹೆಂಗಸೇಕೆ ಓದಬೇಕು ಅನ್ನುವುದು ಲಿಂಗಮ್ಮನ ವಿಚಾರ. ಮಹಾದೇವಿಯ ಹಠದ ಮುಂದೆ ತಾಯಿಯ ಆಟ ನಡೆಯಲಿಲ್ಲ. ಅವಳು ಮಠಕ್ಕೆ ಹೋದಳು. ಕಲಿಕೆಯನ್ನು ಮುಂದುವರೆಸಿದಳು. ತಾನೂ ಪುಟ್ಟದಾಗಿ ವಚನಗಳನ್ನು ಬರೆಯುವುದಕ್ಕೆ ಪ್ರಾರಂಭಿಸಿದಳು.

ಹನ್ನೆರಡು ವರುಷ ತುಂಬುವಾಗಲೇ ಲಿಂಗಮ್ಮ ಮಗಳಿಗೆ ಮದುವೆ ಮಾಡಬೇಕೆಂದು ಬಯಸಿದಳು. ಮಹಾದೇವಿಗೆ ಮದುವೆ ಎಂಬುದೊಂದು ಬಂಧನ. ಒಲ್ಲೆ ಎಂದಳು. ಸತಿಭಾವ ಭಕ್ತಿ ಅವಳಲ್ಲಿ ಆಗಲೇ ತುಂಬಿ ಬಿಟ್ಟಿತ್ತು. ಚೆನ್ನಮಲ್ಲಿಕಾರ್ಜುನನೇ ತನ್ನ ಪತಿ ಎಂಬ ಭಾವ ಅವಳಲ್ಲಿ ಬೇರೂರಿ ಬಿಟ್ಟಿತ್ತು.

ಉಳ್ಳುದೊಂದು ತನು ಉಳ್ಳುದೊಂದು ಮನ
ನಾನಿನ್ನಾವ ಮನದಲ್ಲಿ ಧ್ಯಾನವ ಮಾಡುವೆನಯ್ಯಾ
ಸಂಸಾರವನಾವ ಮನದಲ್ಲಿ ತಲ್ಲೀಯವಾಹೆನಯ್ಯ
ಅಕಟಕಟಾ ಕೆಟ್ಟೆ ಕೆಟ್ಟೆ ಸಂಸಾರಕ್ಕಲ್ಲ
ಎರಡಕ್ಕೆ ಬಿಟ್ಟ ಕರುವಿನಂತೆ, ಪರಮಾರ್ಥಕ್ಕಲ್ಲ
ಬಿಲ್ಪ ಬೆಳವಲ ತಾಯಾನೊಂದಾಗಿ ಹಿಡಿಯಲು ಬಹುದೆ
ಚೆನ್ನಮಲ್ಲಿಕಾರ್ಜುನಾ!

- ಎಂದು ತಾಯಿ ಲಿಂಗಮ್ಮನಲ್ಲಿ ವಾದ ಮಾಡುತ್ತಾಳೆ-

ಇರುವುದೊಂದು ದೇಹ, ಮನಸ್ಸು ಅದನ್ನು ಚೆನ್ನಮಲ್ಲಿಕಾರ್ಜುನನಿಗೆ ಆಗಲೇ ಒಪ್ಪಿಸಿಯಾಗಿದೆ. ಇನ್ನಾವ ಸಂಸಾರ ನನಗೆ ಎನ್ನುವುದು ಮಹಾದೇವಿಯ ವಾದ.

"ರೂಪವಿಲ್ಲದ ಸಾವಿಲ್ಲದ, ಆಕಾರವಿಲ್ಲದ, ಭಯಪಡದ ಚೆನ್ನಮಲ್ಲಿಕಾರ್ಜುನಿಗೆ ನಾನೊಲಿದೆ -ಮಿಕ್ಕ ಲೋಕದವರ ಸಂಬಂಧ ನನಗೆ ಬೇಡಾ" - ಎಂದು ತಾಯಿಗೆ ಒಂದೇ ಮನಸ್ಸಿನಿಂದ ತನ್ನ ನಿರ್ಧಾರವನ್ನು ತಿಳಿಸುತ್ತಾಳೆ.

ಲಿಂಗಪತಿ - ಶರಣಸತಿ ಎನ್ನುವ ವಿಚಾರದ ಅರ್ಥ ಅವಳಿಗಾಗಲೇ ಮನನವಾಗಿರುತ್ತದೆ. ಮಹಾದೇವಿಯ ವಾದ ಲಿಂಗಮ್ಮನಿಗೆ ಕೋಪ ಬರಿಸುತ್ತದೆ.

"ಹೆಣ್ಣು ಇಷ್ಟು ಮಾತನಾಡಬಾರದು" ಎಂದು ಗದರುತ್ತಾಳೆ - ಓಂಕಾರ ಶೆಟ್ಟಿ ಮಗಳ ಮಾತಿಗೆ ಉತ್ತರ ಕೊಡಲಾರದೇ ಸುಮ್ಮನೆ ನಿಂತಿರುತ್ತಾನೆ.

ಅಂದಿನ ಆ ಸಮಾಜದಲ್ಲಿ ಹೆಣ್ಣು ಮನೆಯಿಂದ ಹೊರಗೆ ಕಾಲಿರಿಸುವುದೇ ಕಷ್ಟವಾಗಿದ್ದ ಸಂದರ್ಭದಲ್ಲಿ ಮಹಾದೇವಿ ಮಠದ ಹೊಸ್ತಿಲೊಳಗೆ ಕಾಲಿಟ್ಟು ಓದಿ ಬರೆದು ವಚನಗಳ ರಚನೆಗಳನ್ನು ಮಾಡುತ್ತಿದ್ದಳು. ಅಂದರೆ ಇಂದು ನಾವು ಅಕ್ಷರಗಳನ್ನೂ ಕಲಿಯಲಾಗದ ಹೆಂಗಸಿನ ಸ್ಥಿತಿಗಳಿಗೆ ಹೋಲಿಸಿ ನೋಡಿದರೆ ನಾವೆಷ್ಟು, ಇನ್ನೂ ಇಂಥ ವಿಚಾರಗಳಿಂದ ಸ್ಫೂರ್ತಿ ಹೊಂದಿ ಪ್ರಗತಿಯನ್ನು ಸಾಧಿಸಬೇಕಾಗಿದೆ ಅಂತ ಅನಿಸುತ್ತದೆ ಅಲ್ಲವೇ?.

"ಹೆಣ್ಣು ಮಾತನಾಡಬಾರದೇ - ಮನಸ್ಸಿಗೆ ಒಗ್ಗದ ಬದುಕಿಗೆ ಬಾಗಬೇಕೆ" ಎಂದು ಲಿಂಗಮ್ಮನನ್ನು ಮಹಾದೇವಿ ಮತ್ತೆ ಮತ್ತೆ ಪ್ರಶ್ನಿಸುತ್ತಾಳೆ. ಅವಳ ದೃಢವಾದ ನಿರ್ಧಾರವನ್ನು ಕಂಡ ಶ್ರೀಗುರುಲಿಂಗರು ಅವಳಷ್ಟಕ್ಕೆ ಅವಳನ್ನು ಬಿಟ್ಟುಬಿಡುವಂತೆ ಓಂಕಾರ ಶೆಟ್ಟಿ ಹಾಗೂ ಲಿಂಗಮ್ಮನನ್ನು ಕೇಳಿಕೊಳ್ಳುತ್ತಾರೆ-

ಹೆದರದಿರು ಮನವೆ - ಬೆದರದಿರು ತನುವೆ
ನಿಜವನೊಲಿದು - ನಿಶ್ಚಿಂತವಾಗಿರು
ಫಲವಾದ ಮರವ ಇಡುವುದೊಂದು ಕೋಟಿ
ಎಂವದ ಮರವ ಇಡುವಲೊಬ್ಬರ ಕಾಣೆ

ಭಕ್ತಿಯುಳ್ಳವರ ಬೈವರೊಂದು ಕೋಟಿ
ಭಕ್ತಿಯಿಲ್ಲದವರ ಬೈವರೊಂದು ಕಾಣೆ
ನಿಮ್ಮ ಶರಣರ ನುಡಿಯೆ ಎನಗೆ ಗತಿ
ಸೋಪಾನ ಚೆನ್ನಮಲ್ಲಿಕಾರ್ಜುನ.



ಅರಸನ ಮೆರವಣಿಗೆ ನೋಡುತ್ತಿರುವ ಮಹಾದೇವಿ

ಎಂದು ಮಹಾದೇವಿ ತನ್ನನ್ನು ತಾನೇ ಸಂತೈಸಿಕೊಳ್ಳುತ್ತಾಳೆ. ತನ್ನ ಇಷ್ಟದೈವವಾದ, ಆರಾಧ್ಯದೈವವಾದ ಚೆನ್ನಮಲ್ಲಿಕಾರ್ಜುನ ಅವಳ ವಚನಗಳ ಅಂಕಿತವಾಯಿತು. ಓಂಕಾರ ಶೆಟ್ಟಿಗೆ ಮಗಳ ನಿರ್ಧಾರ ಕೇಳಿ, ಅವಳ ವಿಚಾರಗಳನ್ನು ಕೇಳಿ ಆನಂದವಾಯಿತು.

ಹೀಗಿರುವಾಗ ಕೌಶಿಕ ಮಹಾರಾಜ ವೈಹಾಳಿಗೆ ಹೊರಟ. ವೈಹಾಳಿ ಅಂದರೆ ಕುದುರೆಗಳನ್ನು ಪಳಗಿಸುವುದು. ರಾಜ ಇದರಲ್ಲಿ ಪ್ರವೀಣ, ಕುದುರೆಗಳನ್ನು ಪಳಗಿಸಿ ಲಗಾಮು ಹಿಡಿಯುವುದರಲ್ಲಿ ಪರಿಣಿತ. ವೈಹಾಳಿಗೆ ಉಡುತಡಿಯ ಮೇಲೆ ಹಾದುಹೋಗಬೇಕು, ಹಾಗೆ ಹೋಗಬೇಕಾದರ ಊರೆಲ್ಲಾ ಸಿಂಗಾರವಾಗಬೇಕು. ಓಂಕಾರಶೆಟ್ಟಿ ಊರಿನಲ್ಲಿ ಪ್ರಮುಖನಾದವನು. ಆದ್ದರಿಂದ ಊರಿನ ಸಿಂಗಾರದ ಹೊಣೆ ಹೊತ್ತು ನಿಂತ. ಗೆಳತಿಯರೊಡನೆ ಮಹಾದೇವಿ ಅರಸನ ಮೆರವಣಿಗೆಯನ್ನು ನೋಡುತ್ತಿದ್ದಳು. ಆನೆಯ ಮೇಲೆ ಸಿಂಗರಿಸಿದ ಅಂಬಾರಿಯ ಮೇಲೆ ಕುಳಿತು ಬರುತ್ತಿದ್ದ ಕೌಶಿಕನ ದೃಷ್ಟಿ ಬಿದ್ದದ್ದು ಮಹಾದೇವಿಯ ಮೇಲೆ. ಸುಂದರ, ಗಂಭೀರಭಾವದ ಮಹಾದೇವಿಯ ಸೌಂದರ್ಯ ಅವನ ಹೃದಯವನ್ನು ತಟ್ಟಿತು. ಮನಸ್ಸಿನ ತುಂಬಾ ಮಹಾದೇವಿಯೇ ತುಂಬಿಕೊಂಡಿದ್ದಳು. ಚೆಲುವಿನ ಖನಿಯಾದ ಅವಳನ್ನು ತನ್ನ ಅಂತಃಪುರದ ರಾಣಿಯನ್ನಾಗಿ ಮಾಡಿಕೊಳ್ಳುವ ಬಯಕೆ ಅವನದಾಗಿತ್ತು.

ಕೌಶಿಕ ಮಹಾರಾಜ ಜೈನ. ಮಹಾದೇವಿ ವೀರಶೈವ ಸಂಪ್ರದಾಯದವಳು. ಮದುವೆ ಹೇಗೆ ಸಾಧ್ಯ? ಮಂತ್ರಿಗಳು ಚಿಂತೆ ಮಾಡುತ್ತಲೇ ಓಂಕಾರ ಶೆಟ್ಟಿಯ ಮನೆಗೆ ಬಂದರು. ಮಹಾರಾಜನ ಬಯಕೆಯನ್ನು ತಿಳಿಸಿದರು. ಓಂಕಾರ ಶೆಟ್ಟಿಗೆ ರಾಜನ ಬಯಕೆ ತಿಳಿದು ಭಯವಾಯಿತು. ಕೌಶಿಕ ದುಷ್ಟ-ಕೋಪಿಷ್ಟ. ಮಹಾದೇವಿಯದು ದೃಢ ನಿರ್ಧಾರ. ಮುಂದೇನು ಮಾಡಬೇಕೆಂದು ಅವನಿಗೆ ತೋಚಲಿಲ್ಲ. ಯೋಚನಾಕ್ರಾಂತನಾದ. ಲಿಂಗಮ್ಮ ಮಹಾದೇವಿಯನ್ನು ಪರಿಪರಿಯಾಗಿ ಬೇಡಿದಳು. ಈ ಲೋಕದ ಗಂಡರ ಸಂಬಂಧ ಬೇಡಾ ಅನ್ನುವುದೇ ಮಹಾದೇವಿಯ ನಿರ್ಧಾರ.

"ಗುರುವೇ ತೆತ್ತಿಗನಾದ, ಲಿಂಗವೇ ಮದುವಣಿಗನಾದ
ನಾನೇ ಮದುವಳಿಗೆಯಾದೆನು
ಈ ಭುವನವರಿಯಲು ಅಸಂಖ್ಯಾತರೆನಗೆ ತಾಯಿತಂದೆಗಳು
ಕೊಟ್ಟರು ಸಾದೃಶ್ಯವಪ್ಪ ವರನ ನೋಡಿ

ಇದು ಕಾರಣ ಚೆನ್ನಮಲ್ಲಿಕಾರ್ಜುನನೇ ಗಂಡನೆನಗೆ
ಮಿಕ್ಕಿನ ಲೋಕದವರೆನಗೆ ಸಂಬಂಧವಿಲ್ಲವಯ್ಯಾ"

ಚೆನ್ನಮಲ್ಲಿಕಾರ್ಜುನನಿಗೆ ಮದುವಣಿಗಳಾದ ಮೇಲೆ ಇನ್ನಾವ ಗಂಡಿನ ಸಂಬಂಧ ಹೇಗೆ ಸಾಧ್ಯ ಎಂದವಳು ಉತ್ತರಿಸಿದರೂ, ಕೌಶಿಕನಿಗೆ ಈ ಉತ್ತರಗಳು ತೃಪ್ತಿ ನೀಡಲಿಲ್ಲ. ಅವಳ ಚೆಲುವು ತನ್ನದಾಗಬೇಕೆಂಬ ಕ್ರೂರ ಬಯಕೆ ಅವನಿಗಿತ್ತು. ಅದನ್ನು ಸಾಧಿಸಿಕೊಳ್ಳಲು ಮಹಾರಾಜ ಓಂಕಾರ ಶೆಟ್ಟಿ, ಲಿಂಗಮ್ಮನನ್ನು ಸೆರೆಯಲ್ಲಿಡುತ್ತಾನೆ. ಮಹಾದೇವಿಗೆ ತನ್ನ ತಂದೆತಾಯಿಯರ ಗೋಳನ್ನು ನೋಡಲು ಆಗುವುದಿಲ್ಲ. ಲೌಕಿಕದಲ್ಲಿ ತಂದೆ-ತಾಯಿಯಾಗಿರುವ ಓಂಕಾರ ಶೆಟ್ಟಿ, ಲಿಂಗಮ್ಮನಿಗಾಗಿ ಕೌಶಿಕನನ್ನು ವರಿಸಲು ಒಪ್ಪಿಗೆ ಸೂಚಿಸುತ್ತಾಳೆ. ಮಹಾದೇವಿ ಜಾಣೆ. ಕೌಶಿಕನನ್ನು ಸೋಲಿಸುವ ಪರಿ ಅವಳು ಬಲ್ಲಳು. ಅದಕ್ಕಾಗಿ ಮೂರು ನಿಯಮಗಳನ್ನು ಮದುವೆಗಾಗಿ ಮುಂದಿಡುತ್ತಾಳೆ.

ಮೊದಲನೆಯದು, ಐದು ವಾರಗಳ ವ್ರತಗಳು ಪೂರ್ತಿಯಾಗುವತನಕ ಮಹಾರಾಜ ಅವಳನ್ನು ಮುಟ್ಟಬಾರದು, ಎರಡನೆಯದು, ಗುರು-ಲಿಂಗ-ಜಂಗಮ ಪೂಜೆಗಳಿಗೆ ಅಡ್ಡಿಯಾಗಬಾರದು, ಮೂರನೆಯದು ಇರುಳಿನ ಎರಡನೇ ಜಾವದಿಂದ, ಬೆಳಗಿನ ಮೊದಲನೇ ಜಾವದವರೆಗೆ ಯಾರ ಮುಖ ದರ್ಶನವೂ ಆಗಬಾರದು. ಇವುಗಳಿಗೆ ಅಡೆತಡೆ ಉಂಟಾದರೆ ಅಂದೇ ಈ ಲೌಕಿಕ ಸಂಬಂಧ ಕಡಿದು ಬಿಡುವುದು ಎಂಬ ದೃಢವಾದ ವಿಚಾರವನ್ನು ಅವಳು ಮಂತ್ರಿಗಳಿಗೆ ತಿಳಿಸುತ್ತಾಳೆ. ಕಾಮದಲ್ಲಿ ಮುಳುಗಿದ ರಾಜನು ಅವಳು ಮದುವೆಗೆ ಒಪ್ಪಿದಳು ಅನ್ನುವ ಸಂತೋಷದ ಭರದಲ್ಲಿ ನಿಯಮಗಳ ಗಂಭೀರತೆಯನ್ನು ತಿಳಿದುಕೊಳ್ಳದೇ ತನ್ನ ಒಪ್ಪಿಗೆಯನ್ನು ಸೂಚಿಸುತ್ತಾನೆ.

ಸಂಭ್ರಮದಿಂದ ಮದುವೆಯಾಗುತ್ತದೆ. ಅಕ್ಕಮಹಾದೇವಿ ಒಲ್ಲದ ಮನಸ್ಸಿನಲ್ಲಿ, ತನ್ನ ತುಂಬಾ ಚೆನ್ನಮಲ್ಲಿಕಾರ್ಜುನನನ್ನೇ ತುಂಬಿಕೊಂಡು ರಾಜನ ಅಂತಃಪುರಕ್ಕೆ ಹೋಗುತ್ತಾಳೆ. ಪೂರ್ಣ ಚಂದಿರ ಕತ್ತಲೆಯನ್ನು ಹೊರಗೆ ಹಾಕುವಂತೆ, ತನ್ನ ಸಹವಾಸದಲ್ಲಿ ಅರಸ ಕೂಡ ಭಕ್ತಿಭಾವದ ನೆಲೆಗೆ ಬರುತ್ತಾನೆ ಎಂದು ಭಾವಿಸುತ್ತಾಳೆ.



ಅರಸ ಮತ್ತು ಮಹಾದೇವಿಯ ವಿವಾಹ

ಸದಾ ಪೂಜೆಯಲ್ಲಿ ತೊಡಗಿ ಕಣ್ಮುಚ್ಚಿ ಧ್ಯಾನಿಸುವ ಮಹಾದೇವಿಯನ್ನು ಕಂಡ ಕೌಶಿಕ ಮತ್ತಷ್ಟು ಹುಚ್ಚನಾಗುತ್ತಾನೆ. ಅವಳನ್ನು ಪಡೆಯಲೇಬೇಕು ಎಂಬ ಹುಚ್ಚು ಬಯಕೆಯುಳ್ಳವನಾಗುತ್ತಾನೆ.

ಒಂದು ದಿನ ತನ್ನ ಆಸೆಯನ್ನು ತಡೆದುಕೊಳ್ಳಲಾಗದ ರಾಜ ಮದಿರೆಯನ್ನು ಕುಡಿದು ಮಹಾದೇವಿಯ ಅರಮನೆಗೆ ಬರುತ್ತಾನೆ. ಅಂಗೈಯಲ್ಲಿ ಆತ್ಮಲಿಂಗವನ್ನು ಹಿಡಿದು ಕಣ್ಣುಗಳನ್ನು ಮುಚ್ಚಿ ಪಂಚಾಕ್ಷರಗಳ ನಾದದಲ್ಲಿ ಮುಳುಗಿದ ದೇವಿಯನ್ನು ಕಾಣುತ್ತಾನೆ. ಸಾತ್ವಿಕ ಭಾವದ ಬದಲು ರಾಜನಲ್ಲಿ ಕಾಮವು ಉಕ್ಕಿ ಭರದಿಂದ ಹೋಗಿ ಮಹಾದೇವಿಯ ಕೈಗಳನ್ನು ಮುಟ್ಟುತ್ತಾನೆ. ·ಬೆಂಕಿ ಸ್ಪರ್ಶವಾದಂತೆ ಮಹಾದೇವಿ ಕಣ್ತೆರೆದು ಎದುರಿಗೆ ನಿಂತ, ಮದಿರೆ ಸೇವಿಸಿದ ಅರಸನನ್ನು ಕಾಣುತ್ತಾಳೆ. ಬೆಚ್ಚಿ ಬೀಳುತ್ತಾಳೆ. ಆದರೆ ಕ್ಷಣಮಾತ್ರ. ಎತ್ತರದ ಧ್ವನಿಯಲ್ಲಿ ಅರಸನಿಗೆ "ರಾಜಾ, ಇದು ನಿನ್ನ ಮೊದಲ ತಪ್ಪು. ನನ್ನ

ಪೂಜೆಗೆ ಅಡ್ಡಿ ಮಾಡಿದೆ. ಮೊದಲನೆಯ ನಿಯಮವನ್ನು ಮುರಿದೆ" ಎಂದಾಗ, ಆಗ ರಾಜನಿಗೆ ಅರಿವುಂಟಾಗುತ್ತದೆ. ಅಂಗಲಾಚಿ ಕ್ಷಮೆ ಕೇಳಿಕೊಳ್ಳುತ್ತಾನೆ. ಮಹಾದೇವಿ ಮರುಮಾತಾಡದೆ ಅರಸನನ್ನು ಬಿಟ್ಟು ಉದ್ಯಾನವನಕ್ಕೆ ಧಾವಿಸಿ ಬಂದು ಧ್ಯಾನದಲ್ಲಿ ಮುಳುಗಿ ಬಿಡುತ್ತಾಳೆ. ಹೆಣ್ಣು ಎಂದೂ ಗಂಡಿನ ಅಡಿಯಾಳಲ್ಲ. ಅವಳ ಮನಸ್ಸಿಗೆ ಅವಳೇ ಅಧಿಕಾರಿಣಿ. ಅವಳ ಮನಸ್ಸನ್ನು ನಿಯಂತ್ರಿಸುವ ಅಧಿಕಾರ ಯಾರಿಗೂ ಇಲ್ಲ ಎಂಬುದೇ ಅಕ್ಕನ ನಡವಳಿಕೆಯ ಅರ್ಥಕ್ಕೆ ಸಾಕ್ಷಿ. ಕೌಶಿಕನಿಗೆ ರೋಷ ಉಕ್ಕಿ ಬಂದರೂ ಮಹಾದೇವಿಯ ತೇಜಸ್ಸಿನ ಮುಂದೆ ಅವನು ಕುಗ್ಗಿ ಹೋಗುತ್ತಾನೆ.

ಅರಮನೆಯಲ್ಲಿ ಮಹಾದೇವಿ ಇದ್ದ ಸುತ್ತಮುತ್ತಲಿನ ಪರಿಸರ ಭಕ್ತಿಭಾವವನ್ನು ತುಂಬಿಕೊಂಡಿರುತ್ತಿತ್ತು. ಸಖಿಯರು, ಆಳುಗಳು ಅವಳ ವ್ಯಕ್ತಿತ್ವಕ್ಕೆ ಮಾರುಹೋಗಿದ್ದರು. ಮಹಾದೇವಿಯ ಕನಸನ್ನು ಕಾಣುತ್ತಿದ್ದ ಕೌಶಿಕನಿಗೆ ರಾಜ್ಯದ ಕಾರುಭಾರದ ಮೇಲೆ ಯಾವುದೇ ಆಸಕ್ತಿ ಉಳಿಯುವುದಿಲ್ಲ. ಮದಿರೆಯ ಆಶ್ರಯದಲ್ಲಿ ಎಲ್ಲವನ್ನೂ ಮರೆಯುವ ಪ್ರಯತ್ನ ಮಾಡುತ್ತಾನೆ.

ಗುರುಲಿಂಗರು ಶಿಷ್ಯೆ ಮಹಾದೇವಿಯನ್ನು ಕಂಡು ಬರಲು ಜಂಗಮರೊಡಗೂಡಿ ಅರಮನೆಗೆ ಬರುತ್ತಾರೆ. ಅದ್ದೂರಿಯಾಗಿ ಮಹಾದೇವಿ ಅವರನ್ನು ಬರಮಾಡಿಕೊಳ್ಳುತ್ತಾಳೆ. ಪೂಜೆ ಮಾಡುತ್ತಾಳೆ. ಜಂಗಮರನ್ನು ಭಕ್ತಿಯಿಂದ ಸತ್ಕರಿಸುತ್ತಾಳೆ. ಅವಳ ಸತ್ಕಾರ ಕಂಡು ಗುರುಲಿಂಗರಿಗೆ ಮಾತೇ ಹೊರಡುವುದಿಲ್ಲ. ಹೀಗಿರುವಾಗ ಕೌಶಿಕ ಮಹಾರಾಜ ದೇವಿಯನ್ನು ಕಾಣಲು ಆ ಸಮಯಕ್ಕೇ ಬರುತ್ತಾನೆ ಅರಮನೆಯೊಳಗೆ. ತನ್ನ ಅರಮನೆಯಲ್ಲಿ ತನ್ನನ್ನೇ ನಿರ್ಲಕ್ಷಿಸಿ ಇಷ್ಟು ಅದ್ದೂರಿಯಾಗಿ ಅನ್ನ ಸಂತರ್ಪಣೆಯಾಗುತ್ತಿರುವುದನ್ನು ಕಂಡು ಮನಸ್ಸಿನಲ್ಲಿ ರೋಷ ಉಕ್ಕುತ್ತದೆ. ಜಂಗಮರಿಗೆ ಎಡೆಮಾಡಿದ್ದ ತಟ್ಟೆಗಳನ್ನು ತಳ್ಳಿ ಬಿಡುತ್ತಾನೆ."ಜಂಗಮ ವೇಷಧಾರಿಗಳೇ ನೀವಿಲ್ಲಿಂದ ಹೊರಡಿ, ಇದೇನು ಧರ್ಮಛತ್ರವೆಂದು ತಿಳಿದಿರಾ. ಇದು ನನ್ನರಮನೆ. ಇಲ್ಲಿ ನಿಮಗೆ ಕರೆಯಿತ್ತವರು ಯಾರು?" ಎಂದು ನುಡಿಯುತ್ತಾ ಗುರುಲಿಂಗರ ತೋಳುಗಳನ್ನು ಹಿಡಿದೆಳೆಯುತ್ತಾನೆ. ಗುರುಗಳಿಗೆ,



ಜಂಗಮರಿಗೆ ಮಹಾರಾಜ ಅವಮಾನ ಮಾಡಿದ

ಜಂಗಮರಿಗೆ ಆದ ಅವಮಾನಕ್ಕೆ ಮಹಾದೇವಿಯ ಮನಸ್ಸು ಹುಳಿಯಾಗುತ್ತದೆ. ಕಣ್ಣುಗಳು ದ್ವೇಷದ ಬೆಂಕಿಯುಂಡೆಗಳಾಗುತ್ತವೆ. "ನಿಲ್ಲಿ, ಗುರುಗಳೇ. ರಾಜಾ ಇಂದು ನೀನು ಮಾಡಿರುವ ಅವಮಾನ ಗುರುಗಳಿಗಲ್ಲಾ ನನಗೆ. ನನ್ನ ಹೆಣ್ಣುತನಕ್ಕೆ. ಅವರನ್ನು ನಾನು ಕರೆದವಳು.

ನಡೆ ಶುಚಿ, ನುಡಿ ಶುಚಿ, ತನು ಶುಚಿ,
ಮನ ಶುಚಿ, ಭಾವ ಶುಚಿ
ಇಂದೀ ಪಂಚತೀರ್ಥಂಗಳನ್ನೊಳಗೊಂಡು
ಮರ್ತ್ಯದಲ್ಲಿ ನಿಂದ ನಿಮ್ಮ ಶರಣರ ತೋರಿ
ಎನ್ನನುಳುಹಿಕೊಳ್ಳಾ ಚೆನ್ನಮಲ್ಲಿಕಾರ್ಜುನ

ಎಂದು ಶರಣರ ಸೇವೆಯನ್ನು ಮಾಡಲು ಬಯಸಿದವಳು ನಾನು. ಆಯುಷ್ಯ ಮುಗಿಯುವ ಮೊದಲು ಜಂಗಮ ಸೇವೆಯ ಭಾಗ್ಯ ನನ್ನದಾಗಬೇಕೆಂದು ಬಯಸಿದವಳು

ನಾನು. ಚೆನ್ನಮಲ್ಲಿಕಾರ್ಜುನ ನನ್ನ ಕೂಗನ್ನು ಕೇಳಿ ಇವರನ್ನು ಕಳುಹಿಸಿರುವಾಗ ನೀನ್ಯಾಕೆ ಅವಮಾನ ಮಾಡಿದೆ. ಅವರಿಗೆ ಕ್ರೂರವಾಗಿ ನುಡಿಯಲು ನೀನ್ಯಾರು?" ಎಂದು ಮಹಾದೇವಿ ನುಡಿಯಲು ಕೌಶಿಕನ ಕೋಪಕ್ಕೆ ತುಪ್ಪ ಹಾಕಿದಂತೆ ಮತ್ತಷ್ಟು ಜ್ವಲಿಸಿತು. "ಛೆ! ನೀನೆಂಥ ಹೆಣ್ಣು. ಗಂಡನನ್ನು ವಿಚಾರಿಸಿಕೊಳ್ಳದೇ ಈ ಜಂಗಮರ ಮಧ್ಯೆ ಭಕ್ತಿಯ ಸೋಗು ಹಾಕಿರುವೆ" ಎಂದು ಗದರಿಸಿದಾಗ ಗುರುಲಿಂಗರು ಮಹಾದೇವಿಯ ಅವಸ್ಥೆಗಾಗಿ ಮರುಗುತ್ತಾರೆ. ಅವಳಿಗಾಗುವ ಅವಮಾನವನ್ನು ತಡೆದುಕೊಳ್ಳಲಾಗದೇ ಅವರು ಜಂಗಮರೊಡಗೂಡಿ ಅರಮನೆಯಿಂದ ಹೊರಡುತ್ತಾರೆ. ಮಹಾದೇವಿಯ ಮನಸ್ಸು ಖಿನ್ನವಾಗುತ್ತದೆ. ಅರಸನ ಕೀಳುಮಟ್ಟದ ಅಭಿರುಚಿಯನ್ನು ಕಂಡು ದುಃಖಿಸುತ್ತಾಳೆ. ಐದು ವಾರಗಳ ವ್ರತಕ್ಕಿನ್ನೂ ಗಡವು ಮುಗಿದಿರುವುದಿಲ್ಲ.

ಗುರುಲಿಂಗರು ಹೋದಮೇಲೆ ಮಹಾದೇವಿಯು ತನ್ನ ಕೋಣೆಯೊಳಗೆ ಸೇರಿ ಬಾಗಿಲನ್ನು ಭದ್ರಪಡಿಸಿ ಚೆನ್ನಮಲ್ಲಿಕಾರ್ಜುನನಲ್ಲಿ ಕ್ಷಮೆಯನ್ನು ಯಾಚಿಸುತ್ತಾ ಧ್ಯಾನದಲ್ಲಿ ಮುಳುಗಿ ಬಿಡುತ್ತಾಳೆ. ಕೌಶಿಕನಿಗೆ ಆಗ ತನ್ನ ಎರಡನೆ ತಪ್ಪಿನ ಅರಿವಾಗುತ್ತದೆ. ಚಿಂತಾಕ್ರಾಂತನಾಗುತ್ತಾನೆ. ಸರಿ, ಮೂರನೆ ತಪ್ಪು ಆಗದಂತೆ ನೋಡಿಕೊಳ್ಳುವ ನಿರ್ಧಾರವನ್ನು ಕೈಗೊಳ್ಳುತ್ತಾನೆ. ಮಹಾದೇವಿಯ ಪ್ರತಿಭಟನೆಯ ವರ್ತನೆ ಸತ್ಯರೂಪ ವ್ಯಕ್ತಿ ಸ್ವಾತಂತ್ರ್ಯದ ಪ್ರತೀಕ ಅನ್ನಬಹುದು. ಅಂದಿನಿಂದ ಮಹಾದೇವಿ ಉಪವಾಸದಿಂದ ತನ್ನ ದೇಹವನ್ನು ದಂಡಿಸತೊಡಗಿದಳು. ಲಿಂಗ ಪಾದೋದಕವೇ ಅವಳಿಗೆ ಆಹಾರವಾಯಿತು. ಅವಳ ನಿರ್ಧಾರವನ್ನು ಕಂಡ ಮಂತ್ರಿಗಳು ಅರಮನೆಯ ಇತರರು ಯೋಚನೆಯಿಂದ ತಳಮಳಿಸಿದರು. ಕೌಶಿಕನು ಪರಿಪರಿಯಾಗಿ ಬೇಡಿಕೊಂಡರೂ ಮಹಾದೇವಿಯದು ಅಚಲ ನಿರ್ಧಾರ.

ದೇವದೇವಾ, ಶಿವಲಾಂಛನವನೇರಿಕೊಂಡು
ಮನೆಗೆ ಬಂದವರಂ ಕಡೆಗಣಿಸಿ ಎಂತು ನೋಡುತ್ತಿರ್ಪೆ?
ಅವರಿಗೆ ಸತ್ಕಾರಮಂ ಮಾಡಲಿಲ್ಲದಿರ್ದೊಡೆ
ಎನ್ನ ನೀ ಧರೆಯ ಮೇಲಿರಿಸುವ
ಕಾರಣವೇನು ಚೆನ್ನಮಲ್ಲಿಕಾರ್ಜುನ

ಎಂದು ಚೆನ್ನಮಲ್ಲಿಕಾರ್ಜುನನನ್ನು ಪ್ರಶ್ನಿಸುತ್ತಾ ಹಾಡಿ ಹಲುಬಿದಳು. ಕೌಶಿಕನ ಚಿಂತೆ ಗಾಢವಾದಂತೆ ಅವಳ ಮೇಲಿನ ಆಸೆಯೂ ಬಲಗೊಳ್ಳುತ್ತಾ ಹೋಯಿತು. ಅರಮನೆಯಲ್ಲಿ ಚೆಲುವಿನ ಹೆಂಗಸರಿಗೇನು ಕಡಿಮೆ ಇಲ್ಲ. ಆದರೂ ಅವನ ಕಾಯದ ತುಂಬಾ, ಮನಸ್ಸಿನ ತುಂಬಾ ಮಹಾದೇವಿಯೇ ತುಂಬಿದ್ದಳು.

ಅಂದು ಕೌಶಿಕನಿಗೆ ಕರಾಳ ದಿನ. ಮಹಾದೇವಿಗೆ ಮಹತ್ತರವನ್ನು ಸಾಧಿಸುವ ಪರ್ವಕಾಲ. ಮಹಾದೇವಿ ಪೂಜಾದಿಗಳನ್ನು ಮುಗಿಸಿ ಮಲಗಿದ್ದಳು. ಚಂದಿರನ ಶೀತಲ ಕಿರಣಗಳು ಅವಳ ಮೇಲೆ ಬಿದ್ದಿದ್ದವು. ಹಾಲುಗಲ್ಲದ ಚೆಲುವು ಇಮ್ಮಡಿಸಿತ್ತು. ಕೌಶಿಕನಿಗೆ ಮದಿರೆಗಿಂತ ಹೆಚ್ಚಿನ ಮತ್ತು ಉಕ್ಕಿತು. ಅವಳ ಕೆನ್ನೆಯನ್ನು ತಟ್ಟುವುದರಲ್ಲಿ ಕಣ್ಣುಬಿಟ್ಟಳು ದೇವಿ. ಛೀ, ಅನ್ನುವ ಉದ್ಗಾರ ಅವಳ ಬಾಯಿಯಿಂದ ಹೊರಬಿತ್ತು. "ಥೂ ಪಾಪಿ ನನ್ನನ್ನು ಮುಟ್ಟಬೇಡಾ" ಎಂದು ಅರಿಕೆ ಮಾಡಿಕೊಂಡಳು. ಕೌಶಿಕನ ಕಾಮದ ಹುಚ್ಚು ಏರಿತು. ತಾನೇನು ಮಾಡುತ್ತಿರುವೆ ಎಂಬ ಪರಿವೆ ಅವನಿಗೆ ಇರಲಿಲ್ಲ. ಮಹಾದೇವಿ ತನ್ನವಳಾಗಬೇಕು ಎಂದುಕೊಳ್ಳುತ್ತಾ ಅವಳನ್ನು ಹಿಡಿಯಲು ಹೋದ. ಮಹಾದೇವಿಯ ಒಳಗಿನ ಮನಸ್ಸು ಜಾಗೃತವಾಯಿತು. ಮೂರನೆಯ ತಪ್ಪು ಮಾಡಿದ ಕೌಶಿಕ ಎಂದು ಅರಿವಾದೊಡನೆ ಬಂಧನ ಮುಕ್ತಳಾದಳು ಮಹಾದೇವಿ.

ಗಗನದ ಗುಂಪ ಚಂದ್ರಮ ಬಲ್ಲುದಲ್ಲದೆ,
ಕಡೆಯಲಿದ್ದಾಡುವ ಹದ್ದು ಬಲ್ಲುದೆ ಅಯ್ಯಾ?
ನದಿಯ ಗುಂಪ ತಾವರೆ ಬಲ್ಲುದಲ್ಲದೆ,
ಕಡೆಯಲ್ಲಿದ್ದ ಹೊನ್ನಾವರಿಕೆ ಬಲ್ಲುದೆ ಅಯ್ಯಾ?
ಪುಷ್ಪದ ಪರಿಮಳವ ತುಂಬಿ ಬಲ್ಲುದಲ್ಲದೆ,
ಕಡೆಯಲ್ಲಿದ್ದಾಡುವ ನೊರಜು ಬಲ್ಲುದೆ ಅಯ್ಯಾ?
ಚೆನ್ನಮಲ್ಲಿಕಾರ್ಜುನಯ್ಯಾ, ನಿಮ್ಮ ಶರಣರ ನಿಲುವು ನೀವೇ ಬಲ್ಲಿರಲ್ಲದೆ
ಈ ಕೋಣನ ಮೈಮೇಲಣ ಸೊಳ್ಳೆಗಳೆತ್ತ ಬಲ್ಲವಯ್ಯಾ?

ಶರಣರ ನಿಲುವನ್ನು ಅರಿಯಲು ಬಹು ಎತ್ತರಕ್ಕೆ ಏರಬೇಕು. ಚೆನ್ನಮಲ್ಲಿಕಾರ್ಜುನನ ಭಕ್ತರಿಗೆ ದೊರೆವ ಮರ್ಯಾದೆ ಈ ಮಹಲಿನಲ್ಲಿ ಹೇಗೆ ನಡೆಯಿತು ಎಂಬುದನ್ನು ನೆನೆದುಕೊಳ್ಳುತ್ತಾ ಮಹಾದೇವಿ ಕೌಶಿಕನಿಗೆ ತನ್ನ ಮೇಲೆ ಯಾವ ಅಧಿಕಾರವೂ ಇಲ್ಲ ಎಂದು ತಿಳಿಸುತ್ತಾಳೆ. ಅರಮನೆಯಿಂದ ಹೊರ ಹೊರಟ ಮಹಾದೇವಿಯನ್ನು ತಡೆಯುವ ಶಕ್ತಿ ಕೌಶಿಕನಿಗೆ ಇರುವುದಿಲ್ಲ. ಮಹಾದೇವಿಗೆ ಯಾವ ಹಂಗೂ ಇಲ್ಲ. ಕೌಶಿಕನನ್ನೂ, ಅರಮನೆಯನ್ನೂ ತೊರೆದು ಹೊರಡುತ್ತಾಳೆ.

ಕೈಸಿರಿಯ ದಂಡವಕೊಳ್ಳಬಹುದಲ್ಲದೆ,
ಮೈಸಿರಿಯ ದಂಡವ ಕೊಳಲುಂಟೆ?
ಉಟ್ಟ ಉಡಿಗೆ ತೊಡಿಗೆಗಳ
ಸೆಳೆದುಕೊಳ್ಳಬಹುದಲ್ಲದೆ ಮುಚ್ಚಿ ಮುಸುಕಿರ್ದ
ನಿರ್ವಾಣವ ಸೆಳೆದುಕೊಳ್ಳಬಹುದೆ?
ಚೆನ್ನಮಲ್ಲಿಕಾರ್ಜುನ ದೇವರ ಬೆಳಗನುಟ್ಟು
ಲಜ್ಜೆಗೆಟ್ಟವಳಿಗೆ ಉಡಿಗೆ ತೊಡುಗೆಗಳ ಹಂಗೇಕೋ ಮರುಳೆ?

ಚೆನ್ನಮಲ್ಲಿಕಾರ್ಜುನನ ತಾರುಣ್ಯದ ಉಡುಗೆ ತೊಟ್ಟ ತನಗೆ ಕೌಶಿಕನು ಕೊಟ್ಟ ಈ ಬಾಹ್ಯದ ಉಡುಗೆಯ ಹಂಗೇಕೆ ಅನ್ನುತ್ತಾ ತಾನು ದಿಗಂಬರೆಯಾಗುತ್ತಾಳೆ. ಕೌಶಿಕ ಮೂಕನಾಗುತ್ತಾನೆ. ಸುತ್ತಲೂ ನಿಂತವರೂ ದಿಗ್ಭ್ರಾಂತರಾಗುತ್ತಾರೆ.

"ನಾನು ಎಂದರೆ ಈ ದೇಹವಲ್ಲ, ನಾನು ಎಂದರೆ ಆತ್ಮ. ಆತ್ಮ ಸುಖವನ್ನು ಕಾಣಬೇಕು. ನಾನು ನಿನಗೆ ಬುದ್ಧಿ ಕಲಿಸಲು ಬಟ್ಟೆ ಕಳಚಿರುವೆ. ಹೆಣ್ಣು ಭೋಗಕ್ಕಿರುವ ವಸ್ತು ಮಾತ್ರವಲ್ಲ. ಅವಳ ಮನಸ್ಸಿಗೆ, ಇಚ್ಛೆಗೆ ಯಾವ ಕಡಿವಾಣವೂ ಇರಬಾರದು. ಹೆಣ್ಣು ತಾಯಸ್ಥಾನದಲ್ಲಿರುವವಳು. ಇನ್ನಾದರೂ ಬುದ್ಧಿ ಕಲಿತು ಬಾಳು" ಎಂದು ಕೌಶಿಕನಿಗೆ ನುಡಿಯುತ್ತಾ ಹೊರಡುತ್ತಾಳೆ. ಮೂಳೆ-ಮಾಂಸಗಳಿಂದ ಕೂಡಿರುವ ಈ ದೇಹದಲ್ಲಿ ಇರುವುದಾದರೂ ಏನು? ಎಂದು ಹೊರಡುತ್ತಿದ್ದ ಮಹಾದೇವಿಯನ್ನು ಕಂಡು ಕೌಶಿಕ



ದಿಗಂಬರಳಾಗಿ ಮಹಾದೇವಿ ಜಂಗಮರ ಮಠಕ್ಕೆ ತೆರಳಿದಳು

ಎಚ್ಚೆತ್ತ. "ಮಹಾದೇವಿ, ಮಹಾದೇವಿ" ಕ್ರೋಧದಿಂದ ಬದಲಾದ ಅವನ ಕರುಣೆಯ ಕೂಗಿಗೂ ಮಹಾದೇವಿ ಹಿಂತಿರುಗಿ ನೋಡಲಿಲ್ಲ.

ಶಕ್ತಿ ಮೀರಿ ಕೂಗಿದ ರಾಜ ನಿಂತಲ್ಲೇ ಕುಸಿದು ಬಿದ್ದ.

ಅರಮನೆಯಿಂದ ಹೊರಟ ಮಹಾದೇವಿಗೆ ಹೋಗುವುದೆತ್ತ ಎಂಬುದು ಹೊಳೆಯಲಿಲ್ಲ. ಮನೆಯೆಡೆಗೆ ಆವಳ ಕಾಲುಗಳು ತಿರುಗಲಿಲ್ಲ. ಮಠದೆಡೆಗೆ ಹೊರಟಳು. ನೀಳವಾದ ಕೂದಲುಗಳನ್ನೇ ಉಡುಗೆಯಾಗಿ ಮಾಡಿಕೊಂಡ ಮಹಾದೇವಿಯನ್ನು ಕಂಡು ಊರಿನವರು ಅಚ್ಚರಿಯಿಂದ ನೋಡತೊಡಗಿದರು.

ಗುರುಲಿಂಗರು ಮೂಕವಿಸ್ಮಿತರಾದರು. "ಏಕೆ ದಿಗಂಬರೆ ಆಗಿರುವೆ" ಎಂದು ಅವರು ಕೇಳಿದ ಪ್ರಶ್ನೆಗೆ "ನಿಮ್ಮ ಅಳಿಯ ನನ್ನ ಚೆನ್ನಮಲ್ಲಿಕಾರ್ಜುನನೂ ದಿಗಂಬರನಲ್ಲವೇ ಗುರುಗಳೇ" ಎಂದು ನುಡಿದಳು.

"ಗುರುಗಳೇ, ಅನುಭವ ಮಂಟಪಕ್ಕೆ ಹೋಗಲು ಅನುಮತಿ ನೀಡಿ" ಎಂದ ಮಹಾದೇವಿಗೆ ಗುರುಲಿಂಗರು ತಮ್ಮ ಸಂಪೂರ್ಣ ಅನುಮತಿ ನೀಡುತ್ತಾರೆ.

ಸಾಮಾನ್ಯ ಹೆಂಗಸಲ್ಲ ಮಹಾದೇವಿ. ಹೆಂಗಳೆಯರ ಕುಲಕ್ಕೆ ಕಲಶಪ್ರಾಯಳು ಇವಳು. ಹೆಣ್ಣನ್ನು ತೊತ್ತೆಂದು ಕಾಣುವ ಸಮಯದಲ್ಲಿ ಜಗತ್ತನ್ನು ಎದುರಿಸಿ, ಸಮಾಜದ ಕಟುನುಡಿಗಳಿಗೆ ಬೆದರದೆ ತನ್ನ ಗುರಿಯತ್ತ ನಡೆದವಳು - ಚೆನ್ನಮಲ್ಲಿಕಾರ್ಜುನನನ್ನು ಅರಸುತ್ತ ಹೊರಟಳು ಮಹಾದೇವಿ. ದಿಗಂಬರೆಯಾಗಿರುವ ಮಗಳನ್ನು ಕಂಡು ತಾಯಿ ಲಿಂಗಮ್ಮನ ಹೃದಯ ದುಃಖದಿಂದ ಕುದಿಯುತ್ತದೆ.

"ಗಂಡ ಮೆಚ್ಚುವಂತೆ ಇರಬೇಕು ಇದು ಸತಿಧರ್ಮ
ನನ್ನ ಪತಿ ಚೆನ್ನಮಲ್ಲಿಕಾರ್ಜುನ ಬಯಸಿದ್ದು ವಿಭೂತಿ ಲೇಪನವಲ್ಲದೆ
ಉಡುಗೆಯನ್ನಲ್ಲ. ರುದ್ರಾಕ್ಷಿಯೇ ಮೈಮೇಲಿನ ನಿಜವಾದ
ಆಭರಣ. ಚೆನ್ನಮಲ್ಲಿಕಾರ್ಜುನನ ವಧು ನಾನು
ಹೀಗಿರುವುದೇ ನನಗೆ ಸಲ್ಲುವುದು"
ಎಂದು ತಾಯಿಯನ್ನು ಸಮಾಧಾನಪಡಿಸುತ್ತಾಳೆ.



ಮಹಾದೇವಿ ತಾಯಿಗೆ ಸಮಾಧಾನ ಮಾಡಿದಳು

ಮುಂಗೈಯಲ್ಲಿ ವೀರಕಂಕಣವನಿಕ್ಕಿ
ಮುಂಗಾಲಲ್ಲಿ ತೊಡರು ಬಾವುಲಿಯ ಕಟ್ಟಿದೆ
ಗಂಡುಡುಗೆಯನ್ನುಟ್ಟೆನೆಂಬ ಮಾತಿನ ಬಿರುದ ನುಂಗಿದೆನು,
ಚೆನ್ನಮಲ್ಲಿಕಾರ್ಜುನ
ನಿಮ್ಮಾಣೆಗೆ ಊಣೆಯವ ತಂದೆನಾದಡೆ
ನಿಮ್ಮ ತೊತ್ತಿನ ಮಗಳಲ್ಲವಯ್ಯಾ


"ನನ್ನ ಮುಂಗೈಯಲ್ಲಿರುವ ರುದ್ರಾಕ್ಷಿಯ ವೀರಕಂಕಣವನ್ನು ತೊಟ್ಟವಳು ನಾನು. ಹೆಣ್ಣೇನು-ಗಂಡೇನು ಎಂಬ ಸಮಾಜದ ಸವಾಲನ್ನು ಎದುರಿಸಿ ಹೆಣ್ಣು, ಗಂಡಿನಂತೆ ತನ್ನ ಗುರಿಯನ್ನು ಸಾಧಿಸಬಲ್ಲಳು ಎಂಬುದನ್ನು ಜಗಕ್ಕೆ ತೋರಿಸಿಕೊಡುವೆ" ಎಂಬ ಪ್ರತಿಜ್ಞೆಯನ್ನು ಮಾಡಿದ ಮಹಾದೇವಿ ಅನುಭವ ಮಂಟಪದತ್ತ ಮುನ್ನಡೆಯುತ್ತಾಳೆ.

ಅನುಭವ ಮಂಟಪದಲ್ಲಿ ಅನೇಕ ಶರಣರನ್ನು ಕಾಣುತ್ತಾಳೆ. ಅಲ್ಲಮ ಪ್ರಭುವಿನ ಹಾಗೂ ಬಸವಣ್ಣನವರ ಅಡಿದಾವರೆಗಳನ್ನು ಸ್ಪರ್ಶಿಸಿ ನಮಸ್ಕರಿಸುತ್ತಾಳೆ. ಅನುಭವ ಮಂಟಪದಲ್ಲಿ ಒಂದುಕ್ಷಣ ಮೌನ ಆವರಿಸುತ್ತದೆ.

ಅರಸಿ ತೊಳಲಿದಡಿಲ್ಲ, ಹರಸಿ ಬಳಲಿದಡಿಲ್ಲ
ಬಯಸಿ ಹೊಕ್ಕರಿಲ್ಲ, ತಪಸ್ಸು ಮಾಡಿದಡಿಲ್ಲ
ಅದು ತಾನಹ ಕಾಲಕ್ಕಲ್ಲದೆ ಸಾಧ್ಯವಾಗದು
ಶಿವನೊಲಿದಲ್ಲದೆ ಕೈಗೂಡದು
ಚೆನ್ನಮಲ್ಲಿಕಾರ್ಜುನನೆನಗೊಲಿದನಾಗಿ
ನಾನು ಸಂಗನ ಬಸವಣ್ಣನ ಶ್ರೀಪಾದವ ಕಂಡು ಬದುಕಿದೆನು

ಎಂದು ಭಕ್ತಿ ತುಂಬಿ ಹಾಡುತ್ತಾಳೆ.

"ಎನ್ನ ಹೆತ್ತ ತಾಯಿ ಮಹಾದೇವಿಯಕ್ಕನ ನಿಲುವ ನೋಡಯ್ಯ ಪ್ರಭುವೆ" ಎಂದು ಬಸವಣ್ಣನವರು ನುಡಿದದ್ದು ಕಂಡು ಮಹಾದೇವಿಯ ಮೈಮನ ನವಿರೇಳಿತು.



ಬಸವಣ್ಣ ಮತ್ತು ಅಕ್ಕಮಹಾದೇವಿ

ಚೆನ್ನಮಲ್ಲಿಕಾರ್ಜುನನ ಶರಣರ ಪಾದಕ್ಕೆ ನಮೋ ನಮೋ ಎಂದು ಭಾವ ತುಂಬಿ ನಮಿಸುತ್ತಾಳೆ ಸಭೆಗೆ.

ಅಲ್ಲಮ ಪ್ರಭುವಿಗೆ ಅಕ್ಕನ ಮಹಿಮೆಯ ಅರಿವು ಇದ್ದಿತಾದರೂ ಪರೀಕ್ಷಿಸಿ ನೋಡುವ ಕುತೂಹಲ. "ಆಡುತ್ತ, ಪಾಡುತ್ತಾ, ಹೇಳುತ್ತಾ, ಕೇಳುತ್ತಾ ಇರುವತನಕ ಲಿಂಗ ಭಕ್ತರ ಸಂಗವ ಬಯಸಿ ಬಂದಿರುವೆ" ಎಂದು ಮಹಾದೇವಿ ಒತ್ತಿ ಒತ್ತಿ ಹೇಳುತ್ತಾಳೆ.

"ನಿನ್ನ ಪತಿ ಯಾರು?" ಎಂಬ ಪ್ರಶ್ನೆಗೆ ಉತ್ತರಿಸುತ್ತಾ ಮಹಾದೇವಿ,

"ನನ್ನ ಪತಿಯ ಬಗ್ಗೆ ಹೇಳಲು ನನಗೆ ಸಂಕೋಚವೇಕೆ? ಸಾವಿಲ್ಲದ ಸಹಜನಿಗೆ, ರೂಪಿಲ್ಲದ ಚೆಲುವನಿಗೆ, ಭವವಿಲ್ಲದವನಿಗೆ ನಾನೊಲಿದೆ ಚೆನ್ನಮಲ್ಲಿಕಾರ್ಜುನ ನನ್ನ ಗಂಡ" ಎಂದು ನುಡಿಯುತ್ತಾಳೆ.

ಜಲದ ಮಂಟಪದ ಮೇಲೆ ಉರಿಯ ಚಪ್ಪರವಿಕ್ಕಿ
ಆಲಿಕಲ್ಲ ಹಸೆಯ ಹಾಸಿ ಕಾಲಿಲ್ಲದ ಹೆಂಡತಿಗೆ
ತಲೆಯಿಲ್ಲದ ಗಂಡ ಬಂದು ಮದುವೆಯಾದ
ಎಂದೆಂದೂ ಬಿಡದ ಬಾಳುವೆಗೆ ಕೊಟ್ಟರೆನ್ನ
ಚೆನ್ನಮಲ್ಲಿಕಾರ್ಜುನನೆಂಬ ಗಂಡಗೆನ್ನ ಮದುವೆಯ ಮಾಡಿದರು

ಎಂದು ಕಂಚಿನ ಕಂಠದಿಂದ ಹಾಡಿ ಶರಣ ಪ್ರೀತಿಗೆ ಪಾತ್ರಳಾಗಿ ಅಕ್ಕನಾಗುತ್ತಾಳೆ, ಅಕ್ಕಮಹಾದೇವಿಯಾಗುತ್ತಾಳೆ. "ನಾನು ಬಯಸಿದ್ದರೆ ಯುವಕ ಕೌಶಿಕ, ರಾಜ ಕೌಶಿಕ, ಶ್ರೀಮಂತ ಕೌಶಿಕ ಬಯಸಿದ್ದನ್ನು ಕಾಲಡಿಯಲ್ಲಿ ಇರಿಸುವ ಲೌಕಿಕ ಗಂಡನನ್ನು ಮೆಚ್ಚಿಸಿ ಬಾಳುತ್ತಿದ್ದೆ. ಆದರೆ ನಾನು ಬಯಸಿದ್ದು ಅಲೌಕಿಕ ಸುಖವನ್ನು" ಎಂದು ಅಲ್ಲಮನಲ್ಲಿ ಅರಿಕೆ ಮಾಡಿಕೊಳ್ಳುತ್ತಾಳೆ. ಎಂಥ ದೃಢ ನಿಲುವು ಅಕ್ಕನದು ಅಲ್ಲವೆ?

ಕರಣ ಮೀಸಲಾಗಿ ನಿನಗರ್ಪಿತವಾಯಿತು
ಆನೊಂದರಿಯೆನಯ್ಯಾ
ಎನ್ನಗತಿ ನೀನಾಗಿ, ಎನ್ನಮತಿ ನೀನಾಗಿ
ಪ್ರಾಣ ನಿನಗರ್ಪಿತವಾಯಿತು ನೀನಲ್ಲದೆ ಪೆರತೊಂದು ನೆನೆದಡೆ
ಆಣೆ-ನಿಮ್ಮಾಣೆ ಚೆನ್ನಮಲ್ಲಿಕಾರ್ಜುನ

ಎಂದು ತನ್ನ ಭಕ್ತಿಯ ಸ್ಥಿರತೆಯನ್ನು ಸ್ಪಷ್ಟಪಡಿಸುತ್ತಾಳೆ.



ಗುಹೆ ಸೇರಿ ಐಕ್ಯಳಾದಳು

- ಹೀಗೆ ಅಕ್ಕಮಹಾದೇವಿ ಶರಣರ ಸಾಲಿನಲ್ಲೇ ಪ್ರಮುಖಳಾಗಿ ಮಿಂಚುತ್ತಾಳೆ. ಶ್ರೀಶೈಲದ ದಟ್ಟ ಕಾಡಿನಲ್ಲಿ, "ಎನ್ನ ಚೆನ್ನಮಲ್ಲಿಕಾರ್ಜುನನ ಕಂಡಿರೆ ಗಿಳಿಗಳೇ, ಕೋಗಿಲೆಗಳೇ" ಎಂದು ಹಲುಬುತ್ತಾ ಕದಳೀವನವನ್ನು ಸೇರಿ ಅಲ್ಲಿಯ ಗುಹೆಯಲ್ಲಿ ತಪ ಮಾಡಿ ಐಕ್ಯಳಾಗುತ್ತಾಳೆ. ಈಗಲೂ ಕದಳೀವನದಲ್ಲಿರುವ ಗುಹೆ ಅಕ್ಕಮಹಾದೇವಿಯ ಮಹತ್ವವಾದ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿ ನಿಂತಿದೆ.

ಅಕ್ಕಮಹಾದೇವಿಯ ಕೆಲವು ವಚನಗಳು

೧. ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗೆ ನಾನೊಲಿದೆ
ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ
ಚೆಲುವಂಗೆ ನಾನೊಲಿದೆ ಎಲೆ ಅವ್ವಗಳಿರಾ
ಭವವಿಲ್ಲದ ಭಯವಿಲ್ಲದ ನಿರ್ಭಯ ಚಲುವಂಗೊಲಿದೆ ನಾನು
ಸೀಮೆ ಇಲ್ಲದ ನಿಸ್ಸೀಮಂಗೊಲಿದೆ ನಾನು
ಚೆನ್ನಮಲ್ಲಿಕಾರ್ಜುನನೆಂಬ ಗಂಡಂಗೆ
ಮಿಗೆ ಮಿಗೆ ಒಲಿದೆ ಎಲೆ ಅವ್ವಗಳಿರಾ

೨. ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದಡೆಂತಯ್ಯಾ?
ಸಮುದ್ರದ ತಡಿಯಲೊಂದು ಮನೆಯ ಮಾಡಿ
ನೊರೆತೆರೆಗಳಿಗಂಜಿದಡೆಂತಯ್ಯಾ?
ಸಂತೆಯೊಳಗೊಂದು ಮನೆಯ ಮಾಡಿ
ಶಬ್ದಕೆ ನಾಚಿದಡೆಂತಯ್ಯಾ?
ಚೆನ್ನಮಲ್ಲಿಕಾರ್ಜುನ ದೇವಾ ಕೇಳಯ್ಯಾ

ಲೋಕದೊಳಗೆ ಹುಟ್ಟಿದ ಬಳಿಕ
ಸ್ತುತಿ ನಿಂದೆಗಳು ಬಂದಡೆ
ಮನದಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು

೩ ಕರಕರೆ ಕರಕರೆ ಘನವಯ್ಯೋ
ಕರೆದು ಹೇಳಿ ಎಮ್ಮವರಿಗೆ ಸುದ್ದಿಯ!

ಅತ್ತೆಯ ಮಾತುಗಳೆ ಚಿತ್ತವ ಕಲಕಿವೆ,
ಮತ್ತೆ ಮಾವನೊಳ್ಳಿದನಲ್ಲ; ಎನ್ನ
ಚಿತ್ತವಲ್ಲಭನಿಂದಾದ ಭಂಡ ನಾ
ವಿಸ್ತರಿಸಲಾರೆ: ಹೇಳಿ ಎಮ್ಮವರಿಗೆ

ಮುನ್ನ ಹುಟ್ಟಿದ ಮೂರು ಮಕ್ಕಳ ಕಾಟ,
ಕನ್ನೆಯರೈವರು ಕೂಡಿಕೊಂಡು
ಮನ್ನಣೆಯಿನಿತಿಲ್ಲ ಮೈದುನರೈವರ;
ಇನ್ನಿರಲಾರೆ, ಹೇಳಿ, ಎಮ್ಮವರಿಗೆ

ನಾರಿಯರೈವರ ಕೂಡಿಕೊಂಡು, ನಾ
ದಾರಿಸಂಗಡವಾಗಿ ಬರುತಿರಲು,
ಭೋರನೆ ಶ್ರೀಶೈಲ ಚೆನ್ನಮಲ್ಲೇಶಂಗೆ
ಓರಂತೆ ಮನಸೋತೆ ಸಾರಿತ್ತ ಬಾರೆನೆ ತಾಯಿ!

೪ ಏನೆಂದೆಂಬೆ ಎನ್ನೊಗತನವ ಅಭಿ-
ಮಾನಭಂಗವ ಮಾಡಿದ ಮನೆಯಾತ

ಒಡಕು ಮಡಕೆಯೊಳುದಕವ ತುಂಬಿಟ್ಟು
ಹುಡುಕಿ ತಂದೆನು ನಾನೊಮ್ಮನವ
ಅಡುಗೆಯ ಮಾಡುವಾಗಳುವ ಮಕ್ಕಳ ಕಾಟ
ಬಿಡದೆ ಮನೆಯೊಳಾತನ ಬಿರುನುಡಿ ಘನವಮ್ಮ

ಮೊಸರ ಕಡೆದು ಬೆಣ್ಣೆಯ ನೆಲುವಿನ ಮೇಲಿಕ್ಕಿ
ಶಿಶುವಿಗೆ ನಾ ಮೊಲೆಯ ಕೊಡುತಿರಲು
ಅಸಿಯ ಕಲ್ಲಿನ ಮೇಲೆ ಮಸಿಯನರೆದು ಚೆಲ್ಲಿ
ಹಸಿಯ ಬೆಣ್ಣೆಯ ತಿಂಬ ಹಂಡಿಗತನವ

ಉಟ್ಟುವ ಸೆಳೆಕೊಂಡೊಂದರುವೆಯನೆ ಕೊಟ್ಟು
ಹುಟ್ಟು ಮುರಿದು ಬಟ್ಟ ಬಯಲನಿತ್ತ
ಸೃಷ್ಟಿಗೆ ಶ್ರೀಶೈಲ ಚೆನ್ನಮಲ್ಲಿಕಾರ್ಜುನ
ಬಿಟ್ಟಿಯಿಂದಲಿ ಕಟಕವ ಕಂಡ ತೆರನು

೫ ಒಲ್ಲೆ ಗಂಡನ ಕೂಟ ಒಗೆತನವ,
ಅಕ್ಕಟ ಗಂಡನ ಮನೆ ಬಿರಿಸಯ್ಯಯ್ಯೋ!

ಒಡಕು ಗಂಗಳದಲ್ಲಿ ನೀರಂಬಲಿಯ ನೀಡಿ
ಹೊಡೆದಳು ನಮ್ಮತ್ತೆ ಮೊರದಲ್ಲಿ
ಕಡು ದುಃಖದಿಂದ ನಾ ಒಲೆಯ ಮುಂದೆ ಕುಳಿತರೆ
ಕೊಡಿತನದಿ ಬಂದು ಒದ್ದಳಯ್ಯಯ್ಯೋ!

ನೆತ್ತಿಗೆಣ್ಣೆಯಿಲ್ಲದೆ ತಲೆ ಬತ್ತಿಗಟ್ಟಿತು
ವೃತ್ತ ಜವ್ವನ ಬಾಡಿ ಹೋದವಲ್ಲ!

ಅತ್ತೆಯಾಸೆಯಿಲ್ಲ ಮಾವನ ಲೇಸಿಲ್ಲ
ಚಿತ್ತವಲ್ಲಭನಲ್ಲಿ ಗುಣವಿಲ್ಲವಯ್ಯಯ್ಯೋ!

ಹೇಳಿ ಕಳುಹುವೆ ನಾನವ್ವೆಗಳೂರಿಗೆ
ನಾಳೆ ಕರೆತರಿಸುವೆ ನಮ್ಮಯ್ಯಗಳ
ಕೇಳಯ್ಯ ಶ್ರೀಶೈಲ ಚೆನ್ನಮಲ್ಲಿಕಾರ್ಜುನ
[ಬ್ಬಾಳ] ಪಾಪಿಗಳಲ್ಲಿ ಕೊಟ್ಟರಯ್ಯಯ್ಯೋ!

ನಂಬಿದೆ ಗುರುವೇ ನಂಬಿದೆ, ನಂಬಿದೆ ಸ್ವಾಮಿ
ನಂಬಿದೆ, ಅಂಬಿಕಾರಮಣ, ನೀನಂಬಿಗ!

ಹೊಳೆಯ ಬರವ ನೋಡಂಬಿಗ!
ಸೆಳಹು ಬಹಳ ಕಾಣಂಬಿಗ!
ಸುಳುಹಿನೊಳಗೆ ಬಿದ್ದೆನಂಬಿಗ! ಎನ್ನ
ಸೆಳೆದುಕೊಳ್ಳೋ ನೀನಂಬಿಗ!

ಆರು ತೆರೆಯ ನೋಡಂಬಿಗ!ಬಲು
ಮೀರಿ ಬರುತಲಿವೆ ಅಂಬಿಗ!
ಹಾರಲೊದೆದು, ಎನ್ನ ತಡಿಗೆ ಸೇರಿಸು, ನೀ
ದೂರ ಮಾಡದಿರು ಅಂಬಿಗ!

ತುಂಬಿದ ಹರುಗೋಲಂಬಿಗ! ಅದ-
ಕೊಂಬತ್ತು ಛಿದ್ರ ನೋಡಂಬಿಗ!
ಸಂಭ್ರಮವನು ನೋಡಂಬಿಗ! ಇದ-
ರಿಂಬನರಿದು ತೆಗೆಯಂಬಿಗ!

ಹತ್ತು ಹತ್ತು ನೋಡಂಬಿಗ!
ಹತ್ತಿದರೈವರು ಅಂಬಿಗ!
ಮುತ್ತಿಗೆಗೊಳಗಾದೆನಂಬಿಗ, ಎನ್ನ-
ನೆತ್ತಿಕೊಳ್ಳೋ ನೀನಂಬಿಗ!

ಸತ್ಯವೆಂಬ ಹುಟ್ಟಂಬಿಗ, ಸದ್
ಭಕ್ತಿಯೆಂಬ ಪಥವಂಬಿಗ,
ನಿತ್ಯಮುಕ್ತ ನಮ್ಮ ಚೆನ್ನಮಲ್ಲಿಕಾರ್ಜುನನ
ಮುಕ್ತಿಮಂಟಪಕೊಯ್ಯೋ, ಅಂಬಿಗ!

* * *

ಕನ್ನಡ ವಿಶ್ವವಿದ್ಯಾಲಯವು ನ [illegible] ಪದವಿ ಮಟ್ಟದವರೆಗೆ ಉತ್ತಮ
ಹಾಗೂ ಉಪಯುಕ್ತವಾದ [illegible] ಸ್ತಕ ರಚನಾ
ವಿಭಾಗ'ವನ್ನು ತೆರೆದಿದೆ. [illegible] ಸ್ತಕ ರಚನೆ
ಮಾಡಬೇಕೆಂದು ಚಿಂತಿಸುತ್ತಿ [illegible] ಕ್ಷರರಿಗಾಗಿ
ಪುಸ್ತಕ ಬರೆಸುವ ತಮ್ಮಲ್ಲಿ [illegible] ಕೊಟ್ಟರು.
ವಿಶ್ವವಿದ್ಯಾಲಯವು ಈ ಯೆ [illegible] ಖಕರನ್ನು,
ಭಾಷಾತಜ್ಞರನ್ನು, ಶಿಕ್ಷಣತ [illegible] ಭಿಪ್ರಾಯ,
ಸಲಹೆ, ಸಹಕಾರಗಳನ್ನು ಕೇ [illegible] ವಿನ್ಯಾಸ,
ಚಿತ್ರಗಳ ಮಹತ್ವ, ಸಾಹಿತ [illegible] ಚರ್ಚಿಸಿ
ಯೋಜನೆಯನ್ನು ಅನುಷ್ಠಾ [illegible]

ನವಸಾಕ್ಷರರಿಗಾಗಿ ಕನ್ನಡ [illegible] ವಾಗಿರುವ
ಪುಸ್ತಕಗಳನ್ನೆಲ್ಲ ಒಟ್ಟು [illegible] ತಜ್ಞರಿಂದ
ಪರಿಶೀಲಿಸಲಾಯಿತು. ಜೊ [illegible] ಅವರಿಗೆ
ಕಮ್ಮಟಗಳನ್ನು ನಡೆಸಿ, [illegible] ದ್ದು ಜಿಲ್ಲೆ,
ತಾಲೂಕುಗಳಿಗೆ ಕಳುಹಿಸಿ [illegible] ಂದ ಅದರ
ಗುಣದೋಷಗಳ ಬಗ್ಗೆ ಅ [illegible] ದ್ಯಾಲಯದ
ಗಣಕಯಂತ್ರದಲ್ಲಿ ವಿಶ್ಲೇ [illegible] ರು ನೀಡಿದ್ದ
ಮಾಹಿತಿಗಳನ್ನೆಲ್ಲ ಮರು [illegible] ವಿಷಯದ
ಆದ್ಯತೆಗಳನ್ನು ನಿರ್ಧರಿಸಿ [illegible] ರು ನಮ್ಮ
ವಿಶ್ವವಿದ್ಯಾಲಯದ ಪ್ರಾಧ [illegible] ಕೊಟ್ಟರು.
ಕಲಾವಿದರು ವಿಷಯಗಳಿಗ [illegible] ಪ್ರತಿಗಳನ್ನು
ನವಸಾಕ್ಷರರ ಬಳಿ ಕೊಂಡ [illegible] ಕ್ರಿಯೆಗಳನ್ನು
ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊಳಿಸಲಾಯಿತು.

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರದಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿ ಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು